ದಿನಾಂಕಃ 29.10.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು

ಮುಖ್ಯ ವಿಚಾರಣೆಃ 1 ನೇ ಎದುರುದಾರರ ಪರ ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದೆ ಎಂದು ಪ್ರಮಾಣೀಕರಿಸುತ್ತೇನೆ.

ಈ ಕೆಳಕಂಡ ದಾಖಲೆಯನ್ನು ಹಾಜರುಪಡಿಸುತ್ತಿದ್ದೇನೆ.

| | |
|---|---|
| ನಿ.ಆರ್.1 | ಅಧಿಕಾರ ಪತ್ರ |
| ನಿ.ಆರ್.2 | ವಿಮಾ ಪಾಲಿಸಿ |

ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ

ಅಪಘಾತದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಪೋಲೀಸರು ಸಲ್ಲಿಸಿದ ದಾಖಲೆಗಳ ಆಧಾರದ ಮೇಲೆ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ. ಪೋಲೀಸ್ ದಾಖಲೆಗಳಲ್ಲಿ ಯಾವ ರೀತಿ ಬರೆದಿರುತ್ತಾರೆ ಅದೇ ರೀತಿ ಅಪಘಾತ ಆಗಿರುತ್ತದೆ ಎಂದರೆ ಸರಿ. ಸದರಿ ಅಪಘಾತ ಜೆ.ಸಿ.ಬಿ. ವಾಹನ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ವಾಹನಕ್ಕೆ ವಿಮೆ ಕೊಡುವ ವೇಳೆಯಲ್ಲಿ ನಮ್ಮ ಕಂಪನಿಯವರು ವಾಹನ ನೋಂದಣಿ ಪತ್ರ ಪಡೆದುಕೊಳ್ಳುತ್ತಾರೆ. ಸಾಮಾನ್ಯವಾಗಿ ವಾಹನದ ವಿಮೆ ಅವಧಿ ಮುಗಿದಿದ್ದರೆ ಅದರ ಮಾಲೀಕರಿಂದ ನಾವು ನೋಂದಣಿ ಪತ್ರ ಮತ್ತು ಹಿಂದಿನ ವಿಮೆ ಪತ್ರ ಪಡೆದುಕೊಳ್ಳುತ್ತೇವೆ. ಈ ಪ್ರಕರಣದಲ್ಲಿನ ವಾಹನ ಜೆ.ಸಿ.ಬಿ. ಸಂಖ್ಯೆ ಕೆ.ಎ 53 ಎಂ.ಜೆ. 4084 ವಾಹನಕ್ಕೆ ನಿ.ಆರ್.2 ರಂತೆ ವಿಮೆ ಕೊಡುವ ವೇಳೆಯಲ್ಲಿ ವಾಹನದ ನೋಂದಣಿ ಪತ್ರವನ್ನು ಮಾತ್ರ ಪಡೆದುಕೊಂಡಿರುತ್ತೇವೆ. ನಿ.ಆರ್.2 ರಲ್ಲಿ ವಾಹನದ ವಿಮೆಯ ಅವಧಿ ಮುಗಿದರೆ ಕೇವಲ ವಾಹನ ನೋಂದಣಿ ಪತ್ರದ ಮೇಲೆ ಮಾತ್ರ ವಿಮೆ ಕೊಡಬಹುದು ಎಂದು ನಿಯಮದಲ್ಲಿ ನಮೂದು ಮಾಡಿರುವುದಿಲ್ಲ. ನಾವು ವಾಹನವನ್ನು ತಪಾಸಣೆ ಮಾಡದೆ ನಮ್ಮ ಬೇಜವಾಬ್ದಾರಿತನದಿಂದ ವಿಮೆ ಪಾಲಿಸಿ ನೀಡಿದ ಕಾರಣಕ್ಕಾಗಿ ನಾವೇ ಅರ್ಜಿದಾರರಿಗೆ

ಪರಿಹಾರ ಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ. ನಾವು ನಮ್ಮ ಬಾಧ್ಯತೆಯನ್ನು ತಪ್ಪಿಸಿಕೊಳ್ಳುವ ಸಲುವಾಗಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ.

2 ನೇ ಎದುರುದಾರರು ಮತ್ತು ಅವರ ಪರ ವಕೀಲರನ್ನು ಕೂಗಿಸಿ ಕರೆಯಿಸಲಾಗಿ ಗೈರು ಹಾಜರಿದ್ದು ಆ ಕಾರಣದಿಂದ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ

17 ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ ಸದಸ್ಯರು